


ಮುಳ್ಳಯ್ಯನಗಿರಿ ಏರುತ್ತಾ...

ಕಳೆದ ವಾರದ 'ಚೆನ್ನುಡಿ'
'ಧಂ–ಪತಿ ಮುಯ್ಯಿ' ಕೇಳಿ
**ಸುಮಾವೀಣಾ** ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.



ದೇವಿಯನ್ನ ಆಡುಬಾಷೆಯಲ್ಲಿ ಅನುನಯಿಸುತ್ತಾರೆ. 'ಊರಿಗೆ ಏನು ಕೇಡು ಬಾರದ ಹಾಗೆ ಮಕ್ಕಳು ಮರಿಗಳಿಗೆ ಏಳಿಗೆ ಕೊಟ್ಟು ಕಾಪಾಡವ್ವ, ಪ್ರತಿವರ್ಷ ಕುರಿ ಕಡೀತೀವಿ' ಎಂಬ ಹರಕೆ ದೇವಿಗೆ ಮೊರೆ ಹೋಗುತ್ತದೆ. ಮೊದಲು ಹಣ್ತುಪ್ಪ ಮಾಡಿ, ಮೊಸರನ್ನದ ಎಡೆ ಒಪ್ಪಿಸ್ತಾರೆ. ನಂತರ ಊರಿಗೆಲ್ಲ, ದೇವರ ಎಡೆಗೆ ತಯಾರಾಗಿದ್ರೆ ಎಡೆ ಒಪ್ಪಿಸ ಬನ್ನಿ ಅಂತ ಸಾರಾಕ್ತಾರೆ. ಚಂದಾಗಿ ಅಲಂಕರಿಸಿಕೊಂಡ ಅ ಊರಿನ ಸಸ್ಯಾಹಾರಿ ಜನಾಂಗದವರು ಹೋಳಿಗೆ ತುಪ್ಪ, ಮೊಸರನ್ನ ಹೀಗೆ ಸಿಹಿ ಅಡುಗೆಯ ಎಡೆ ಹಾಕುತ್ತಾರೆ. ತಂಬಿಟ್ಟಾರತಿ ಬೆಳಗಿ ದೇವಿಗೆ ಮೊರೆ ಹೋಗುತ್ತಾರೆ. ನಂತರ ಕುರಿಯೂಟದ ಅಡುಗೆ ಸಾಲಾಗಿ ಬರುತ್ತದೆ.


ದೇವಿ ಹರಕೆ ಅಂತ ಚನ್ನಾಗಿ ಅಲಂಕರಿಸಿಕೊಂಡು ಊರಿಗೂರೇ ಸಿದ್ಧವಾಗಿರುತ್ತೆ, ಮಕ್ಕಳು ಮರಿ ಸಮೇತ, ದೇವಿ ಗದ್ದುಗೆ ಏರಿ ಅಲಂಕಾರದಿಂದ ಮೈದುಂಬಿಕೊಂಡು ಪೂಜಿತಳಾದ ಮೇಲೆ ಕಡಬು, ಸಾರು, ಎಲೆ ತುಂಬಿ ಹರಿಯುತ್ತದೆ. ಇಡೀ ಊರವರೆಲ್ಲಾ ಬಂದು ದೇವಿಗೆ ಎಡೆ ಹಾಕುತ್ತಾರೆ. ಮೊದಲೆಲ್ಲಾ ಕಳಸ ತ್ರಿಶೂಲಗಳಿಂದಷ್ಟೆ ರಾರಾಜಿಸುತ್ತಿದ್ದ ಅಮ್ಮ ಈಗ ಭಕ್ತರ ಕಾಣ್ಕೆ ಹೆಚ್ಚಾದಂತೆ ಬೆಳ್ಳಿಯ ಮುಖವಾಡ, ಕಳಸ ಮುಂತಾದ ಬೆಳ್ಳಿಯ ದೇವಿ ರೂಪುಗೊಳ್ಳುತ್ತಿದ್ದಾಳೆ.

ಅಂತೂ ಹಬ್ಬದ ದಿನ ಇಡೀ ಊರಿಗೆ ಊರೇ ಮಾಂಸದ ಘಮಲಿನ ಸಂಭ್ರಮದಲ್ಲಿ ಮುಳುಗೇಳುತ್ತದೆ.

ಹೊಸಬರಾದರೂ ಪರ್ವಾಗಿಲ್ಲ, ಎಲ್ಲರ ಮನೆಯಲ್ಲಿ ಕರೆಕರೆದು ಒತ್ತಾಯ ಮಾಡಿ ಊಟಕ್ಕೆ ಬಡಿಸುತ್ತಾರೆ. ಹೋಗಿ ಬಂದು ಜನರು ನಾಲ್ಕೈದು ಮನೇಲಿ ಉಂಡು, ಉಂಡಾಡುವಂತಾಗಿರುತ್ತಾರೆ. ಉಣ್ಣುವವರಿಗೂ ಬೇಜಾರಿಲ್ಲ. ಇಕ್ಕುವವರಿಗೂ ಬೇಜಾರಿಲ್ಲ, ಮಾರನೆಯ ದಿನವೂ ಇದೇ ಉಳಿಕೆ ಬಳಕೆ ಸಂಭ್ರಮ ಮುಂದುವರಿಯುತ್ತದೆ. ಸಂಜೆ ನಾಲ್ಕರ ತನಕ ಬರುವ ಭಕ್ತಾದಿಗಳಿಗೆಲ್ಲಾ ಪೂಜೆ ಪುರಸ್ಕಾರಗಳೂ ನಡೆಯುತ್ತಲೇ ಇರುತ್ತವೆ. ಆಗಂತ ಇಲ್ಲಿ ಮಗ್ಗಗಳು ಏನಿಲ್ಲ, ಎಲ್ಲ ಕೃಷಿಕರೇ, ಶಾಲೆಯ ಹಿಂಭಾಗ, ಆಸ್ಪತ್ರೆ ಪಕ್ಕದ ಬಯಲು, ಅಲ್ಲಿ ಇಲ್ಲಿ ಗಂಡು ಮಕ್ಕಳು ಕಳ್ಳು ಕುಡಿದು ಗುಂಪು ಗುಂಪಾಗಿ ಜೂಜಾಡುವ ದೃಶ್ಯ, ಅಂದಿನ ದಿನಕ್ಕೆ ಸರ್ವೇಸಾಮಾನ್ಯ.

ನಾಲ್ಕು ಗಂಟೆಗೆ ದೇವರ ಮೆರವಣಿಗೆ ಹೊರಡುತ್ತದೆ. ಅಷ್ಟರಲ್ಲಿ ಮತ್ತೆ ಸಾರಾಕಿದರೆ, ಯಾರೂ ಊರು ಬಿಡೋ ಹಂಗಿಲ್ಲ, ಅದಕ್ಕೆ ಮುನ್ನ ಊರಿಂದ ಹೊರಡಬಹುದು. ಊರಿಂದ ಹೊರಡುವವರು ಹಣ್ಣು ಕಾಯಿ, ಹೂ ಪ್ರಸಾದ ಅಂತ ಏನನ್ನೂ ತಗಂಡು ಹೋಗೋ ಹಾಗಿಲ್ಲ. ತಲೇಲಿ ಮುಡಿದ್ದಿದ್ದ ಹೂವನ್ನು ಅಲ್ಲೇ ಬಿಟ್ಟು ಹೊರಡಬೇಕು.

ದೇವರ ಮೆರವಣಿಗೆ ಹಿಂದೆ ಊರಿನ ಜನ ಎಲ್ಲ ಹೋಗುತ್ತಾರೆ. ಊರಿನಲ್ಲೊಂದು ಮೈದಾನವಿದೆ. ಅಲ್ಲಿ , ಬ್ಯಾಟೆ ಮರ ಅಂದರೆ ಕಕ್ಕೆ ಮರಕ್ಕೆ ಕಳಸ ಸವಣಿಸಿ ತಲೆಯಲ್ಲಿ ಮುಡಿದ್ದಿದ್ದ ಹೂವನ್ನು ಅಲ್ಲೇ ಹಾಕಿ, ಏಳು ಸುತ್ತಿನ ಕೋಟೆಯನ್ನ ಸುತ್ತಿ ( ಕಲ್ಲಿನಿಂದ ಮಕ್ಕಳಾಟದಂತೆ ನಿರ್ಮಿತವಾದ ಒಂದು ಕೋಟೆ ) ಮನೆಗೆ ಬರಬೇಕು. ಹೀಗೆ ಆಷಾಢದಮ್ಮನ ಹಬ್ಬದ ಸಂಭ್ರಮ ತಣಿಯುತ್ತದೆ, ಮತ್ತೆ ಈ ಸಂಭ್ರಮಕ್ಕೆ ಮುಂದಿನ ಆಷಾಢವನ್ನೇ ಕಾಯುವಂತಾಗುತ್ತದೆ. ■



ಚಿಕ್ಕಮಗಳೂರಿನ ಆಕರ್ಷಣೆ ಹೆಬ್ಬೆ ಜಲಪಾತ

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– editorsu@sudha.co.in